doc-390
T.P-2

R No KRNN 12 ಶ್ರೀ 29 - 10 -1974

in ★ ★ ★ ★ ★
58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಧುರೀಣ ಎಂ. ಎಸ್. ಕೃಷ್ಣರಾವ್ [3 ಪೈಸೆ

ಮಧ್ಯವರ್ತಿ ಚುನಾವಣೆ ನಡೆಸುವುದಿಲ್ಲ

ಅಹಿಂಸಾತ್ಮಕ ಸಮಾಜ ರಚನೆಯುತ್ತ ಶಿಕ್ಷಣದ ವಿಕಾಸ

ಶೈಕ್ಷಣಿಕ ಸುಧಾರಣೆ ಹಾಗೂ ಸಂಶೋಧನೆಯ ಸಮಸ್ಯೆಗಳು ಈಗ ಇಡೀ ವಿಶ್ವದ ಗಮನ ಸೆಳೆದಿದೆ ಶಿಕ್ಷಣ ಮತ್ತು ಸಮಾಜದ ನಡುವಣ ಸಂಬಂಧದ ಸ್ವರೂಪವನ್ನು ನಿರ್ಧರಿಸುವುದೇ ಈ ಎಲ್ಲಾ ಚಿಂತನೆಯ ತಿರುಳು.

ಸ್ವಾತಂತ್ರ್ಯ, ಸತ್ಯ ಹಾಗೂ ನ್ಯಾಯಗಳ ನೈಜ ಸಾಧನೆಯ ಗತಿಯಾಗಿರುವ ಅಹಿಂಸೆಯೇ ಆಧಾರವಾಗಿರುವಂತಹ ಸಮಾಜ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವಲ್ಲಿ ಒಬ್ಬ ವ್ಯಕ್ತಿಯು ಜೀವನ ಪರ್ಯಂತ ಶಿಕ್ಷಣವು ಯಾವ ಪಾತ್ರವನ್ನು ನಿರ್ವಹಿಸುತ್ತದೆ? ಈ ಉದ್ದೇಶದ ಸಾಧನೆಗಾಗಿ ಪ್ರತಿಯೊಂದು ಸಮಾಜವೂ, ತನ್ನದೇ ಆದ ರೀತಿಯಲ್ಲಿ ಹೊಸ ಗುರಿಗಳನ್ನೂ ಜೀವನದ ಗುಣಾಂಶ ಸುಧಾರಣೆಗೆ ನೈಜ ಶೋಧನೆಯನ್ನೂ ಮಾಡಬೇಕಾಗಿದೆ ; ಶಿಕ್ಷಣ ಹಾಗೂ ಅಹಿಂಸಾತ್ಮಕ ಸಮಾಜ ವ್ಯವಸ್ಥೆಗೆ ಸಮಾಜದ ಉನ್ನತ ಆಗತ್ಯಗಳು ಹಾಗೂ ಮೌಲ್ಯಗಳಿಗೆ ಪೋಷಕವಾಗಬೇಕಲ್ಲದೇ ವ್ಯಕ್ತಿಯ ಸುಖಕ್ಕೂ ಕಾರಣವಾಗಬೇಕು ; ಈ ಮಾರ್ಗ ಗಮನಾರ್ಹ ಮಾತ್ರವಲ್ಲ ಸಕಾಲಿಕವೂ ಆಗಿದೆ.

ವ್ಯಕ್ತಿಯ ವಿಕಾಸಕ್ಕಾಗಿ ಹಾಗೂ ಸಮಾಜದ ಕಾರ್ಯನಿರ್ವಹಣೆಗಾಗಿ ಹಿಂಸೆಗಿಂತಲೂ ಅಹಿಂಸೆಗೇ ಪ್ರಾಶಸ್ತ್ಯ ನೀಡಬೇಕು : ಏಕೆಂದರೆ ಹಿಂಸೆಯು ನೋವು ಕಾರಣವಾಗಿದ್ದು, ಅವಶ್ಯಕ ಮಾತ್ರವಲ್ಲ ಅಲೌಕಿಕವಾದದ್ದು ; ಹಿಂಸೆ ನಿರ್ಮಾಣಕ್ಕಾಗಿ ಬಳಸಿದಾಗಲೂ ವಿನಾಶವನ್ನೇ ತರುತ್ತದೆ.

ಹಿಂಸೆಯಿಂದ ಇನ್ನಷ್ಟು ಹಿಂಸೆ ಜನಿಸುತ್ತದೆ ; ಅನೇಕ ಸಲ ಪಾಶವೀ ಬಲವನ್ನೇ ಅವಲಂಬಿಸುತ್ತದೆ ; ಧರ್ಮ ರಕ್ಷಣೆಗಾಗಿ, ನ್ಯಾಯವನ್ನು ಎತ್ತಿ ಹಿಡಿಯುವದಕ್ಕಾಗಿ ಹಾಗೂ ದುಷ್ಟ ಉದ್ದೇಶಕ್ಕಾಗಿ ಹಿಂಸೆಯನ್ನು ಬಳಸಿದಾಗಲೂ ಕೊನೆಗೆ ಉಳಿಯುವುದು ಭಸ್ಮ. ಹಾಗೂ ಉಳಿಯುವಂಗವ ಕಳಂಕ ಮಾತ್ರ ; ಇವು ಇಂತಹ ಕೃತ್ಯದಿಂದ ದೊರೆಯುವ ಫಲವನ್ನೇ ನಾಶಮಾಡುತ್ತವೆ.

ಅಹಿಂಸಾತ್ಮಕ ಸಮಾಜದ ರಚನೆ ಅಪೇಕ್ಷಣೀಯ ಮಾತ್ರವಲ್ಲ, ಸಾಧ್ಯವೂ ಆಗಿದೆ ; ಇಂತಹ ಒಂದು ಸಮಾಜ ರಚನೆಯಾದಾಗ ಆಕ್ರಮಣಶೀಲ ಮನೋಭಾವನೆಗಳು ಹಾಗೂ ನಡವಳಿಕೆಯನ್ನು ನಿಯಂತ್ರಿಸಬಹುದು.

ಧಾನ್ಯವು ಜೀವಿಗಳ ಪೋಷಣೆಗೆ ಕಾರಣವಾದುದರಿಂದ ಏಕದೇಶ ಬ್ರಾಹ್ಮಣ ಉಪನಿಷತ್ತಿನಲ್ಲಿ ಒಂದು ಅದ್ಭುತವಾದ ಕಲ್ಪನೆಯ ಪರಿಚಯವಾಗುತ್ತದೆ ಈ ಸೃಷ್ಟಿ ಅಸ್ತಿತ್ವಕ್ಕೆ ಬಂದ ದಿನದಿಂದಲೂ ನಿದ್ರೆಯನ್ನೆ ಮಾಡದ ಸೂರ್ಯದೇವನ ಸೊಬಗನ್ನು ನೋಡು ; ಇದು ಕಾರಣ ಮುಂದೆ ನಡೆ ; ಸದಾ ಜಾಗೃತವಾಗು ಎಂದು ಹೇಳಲಾಗಿದೆ. [ಶ್ರೀ ಪ್ರೇಮುಳ್ಳಾಳ್‌ರವರ ಲೇಖನದಿಂದ]

★

ಜಯಪ್ರಕಾಶ ಪರದವರು

ಮುಂಗಳೂರು — ಶುಕ್ರವಾರ ಜಯಪ್ರಕಾಶ ನಾರಾಯಣರ ಜನ್ಮದಿನೋತ್ಸವ ಸಂದರ್ಭದಲ್ಲಿ, ಅವರ ಪರದ 200 ಯುವಕರು ಮೆರವಣಿಗೆ ನಡೆಸಿದರು

ಚುನಾವಣೆ 1976 ರಲ್ಲಿ

ನವದೆಹಲಿ— ಸಾರ್ವಜನಿಕ ಚುನಾವಣೆಯು ಪಟ್ಟೀಕರಿಸಿನಂತೆ 1976 ರಲ್ಲಿ ನಡೆಯುವುದೆಂದೂ, ಮಧ್ಯಾವರ್ತಿ ಚುನಾವಣೆ ವಿಷಯವಿಲ್ಲವೆಂದೂ ಬಂಗ್ಲಾದೇಶದ ಖಾತ್ರಿದಾರರಿಗೆ ಪ್ರಧಾನಿ ಇಂದಿರಾರವರು ತಿಳಿಸಿದರು.

★

ಮಾತುಕತೆಯಿಂದ ಪ್ರಯೋಜನವಾದೀತೆ

ನವದೆಹಲಿ— ನಾನು ಜಯಪ್ರಕಾಶ ನಾರಾಯಣರೊಡನೆ ಮಾತುಕತೆ ನಡೆಸಲು ಎಂದೂ ತಿರಸ್ಕರಿಸಿಲ್ಲ, ಆದರೆ ಮಾತುಕತೆಯು ಏನಾದರೂ ಪ್ರಯೋಜನವಷ್ಟು ಉತ್ಪಾದಿಸಬೇಕು, ಎಂದು ಪ್ರಧಾನಿ ಇಂದಿರಾರವರು ಬಂಗ್ಲಾದೇಶದ ಖಾತ್ರಿದಾರರಿಗೆ ತಿಳಿಸಿದರು.

●

88000 ನರ್ಸ್‌ಗಳು

ಕಲ್ಕತ್ತಾ— 4 ನೇ ಯೋಜನೆಯ ಕಡೆಯಲ್ಲಿ 120000 ನರ್ಸ್‌ಗಳ ಕನಿಷ್ಠ ಅವಶ್ಯಕತೆ ಇದ್ದಿತಾದರೂ, ಪರಿಶೀತಾದ 88000 ನರ್ಸ್‌ಗಳಿದ್ದರು.

★

ದೇವಾಲಯ ಜೀರ್ಣೋದ್ಧಾರ

ಹೈದರಾಬಾದು— ಕೇರಳ ರಾಜ್ಯದ ಕಾಸರಗೋಡು ತಾಲ್ಲೂಕಿನ ಅನಂತಪುರದಲ್ಲಿನ 12 ಶತಮಾನಗಳ ಪುರಾತನ ಅನಂತ ಪದ್ಮನಾಭಸ್ವಾಮಿ ದೇವಾಲಯದ ಜೀರ್ಣೋದ್ಧಾರವನ್ನು ರೂ 7 ಲಕ್ಷ ಖರ್ಚಿನಲ್ಲಿ ಮಾಡಲಾಗುವುದು.

●

ಮೈಸೂರು— ಕಾಂಗ್ರೆಸ್‌ನ (ಹಳೇ) ನಗರ ಜಿಲ್ಲಾ ಸಮಿತಿಗೆ ಡಾ|| ನರಸಿಂಹಯ್ಯ ಪಂಡಿತ್ ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಕೆ. ಮುಕುಂದರಾವ್ ಮತ್ತು ಕೆ. ಪುಟ್ಟಬುದ್ಧಿ ಕಾರ್ಯದರ್ಶಿಗಳಾಗಿಯೂ ಆಯ್ಕೆಯಾದರು.

ಜೆ ಪಿ. – ಇಂದಿರಾರ ಮಾತುಕತೆ

ಪಾಟ್ನಾ— ಪ್ರಸ್ತುತ ಚಳವಳಿ ಬಗ್ಗೆ ಪ್ರಧಾನಿ ಇಂದಿರಾಗು ಮತ್ತು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣರಲ್ಲಿ ಮಾತುಕತೆಗೆ ಅವಕಾಶವಿರುವುದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರಿ ಬಾರೂಆರು, ಪಾಟ್ನಾ ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ಪತ್ರಿಕೆಯವರೊಡನೆ ಮಾತನಾಡುತ್ತಾ ಹೇಳಿದರು.

★

ಹುಡುಗನ ಶೋಚನೀಯ ಸಾವು

ಪಾಟ್ನಾ— ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾರೂಆರು ವಿಮಾನ ನಿಲ್ದಾಣದಿಂದ ಕಾರ್‌ನಲ್ಲಿ ಹೊರಟ ನಂತರ ಆ ಕಾರು ಸ್ಪೇಕ್ಷಕರಲ್ಲಿ ಒಬ್ಬನಾಗಿದ್ದ 6 ವರ್ಷದ ಹುಡುಗನಿಗೆ ತಗಲಿ ಅವನು ಕೆಳಗೆ ಬಿದ್ದಾಗ ಕಾರಿನ ಹಿಂದೆ ಬಂದ ಪೋಲೀಸು ವ್ಯಾನು ಅವನ ಮೇಲೆ ಹರದು ಅವನಾ ನುಚ್ಚುಗುಚ್ಚಾಗಿ ಸತ್ತನು – ಕಪ್ಪು ಬಾವುಟ ಪ್ರದರ್ಶಿಸುತ್ತಿದ್ದ ಕುಪಿತ ಗುಂಪನ್ನು ಚದುರಿಸಲು ಪೋಲೀಸರು ಮಾಡಿದ ಲಾಠಿಛಾರ್ಜ್‌ನಲ್ಲಿ 10 ಮಂದಿ ಗಾಯಗೊಂಡರು — ಹುಡುಗನ ಸಾವಿಗಾಗಿ ಪ್ರತಿಭಟಿಸಿ, ಪ್ರದರ್ಶನಕಾರರು ರಸ್ತೆಯನ್ನು ಅಡ್ಡ ಕಟ್ಟಿದ್ದರು.

★

ಪದವೀದಾನ ಸಮಾರಂಭ

ಮೈಸೂರು— ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭವು ಡಿಸೆಂಬರ್ 21 ಬೆಳಿಗ್ಗೆ 10–30 ಕ್ಕೆ ನಡೆಯುವುದು – ಕುಲಪತಿ ರಾಜ್ಯಪಾಲ ಶ್ರೀ ಸುಖಾದಯರವರು ಅಧ್ಯಕ್ಷತೆ ವಹಿಸುವರು – ಬಾಬಾ ಅಣು ಸಂಶೋಧನ ಸಂಸ್ಥೆ ಡೈರೆಕ್ಟರ್ ಡಾ|| ರಾಜಾ ರಾಮಣ್ಣನವರು ಘಟಿಕೋತ್ಸವ ಭಾಷಣ ನೂಡುವರು.

★ ಹೈದರಾಬಾದು– ರಸಾಯನಿಯನಿಳ ಗೊಬ್ಬರವನ್ನು ಕಾಳಸಂತೆಯಲ್ಲಿ ಮಾರುತ್ತಿದ್ದ ಒಬ್ಬ ವ್ಯಾಪಾರಿಯನ್ನು ಪೋಲೀಸರು ಬಂಧಿಸಿ, ಅವನಲ್ಲಿದ್ದ ರೂ. 11138 ಬೆಲೆಯ ದಾಸ್ತಾನನ್ನು ವಶಪಡಿಸಿಕೊಂಡರು.

ಕರ್ನಾಟಕದಲ್ಲಿ ಹುಲ್ಲಿನ ಅಚ್ಚುಗಳನ್ನು ತಯಾರಿಸುವ ಉದ್ಯಮ

ಬೆಂಗಳೂರು– ಕರ್ನಾಟಕ ರಾಜ್ಯವು ತನ್ನ ಅರಣ್ಯ ಪ್ರದೇಶದಲ್ಲಿ ಉದ್ಯಮಗಳ ಅಭಿವೃದ್ಧಿಗಾಗಿ ಕಾರ್ಪೊರೇಷನ್– ಹಸಿರು ಹುಲ್ಲಿನ ಕೃಷಿ ಕ್ಷೇತ್ರ ಹಾಗೂ ಹುಲ್ಲಿನ ಅಚ್ಚುಗಳನ್ನು ತಯಾರಿಸುವ ಉದ್ಯಮವನ್ನು ದೇಶದಲ್ಲಿಯೇ ಪ್ರಥಮಪ್ರಯತ್ನವಾಗಿ ಪ್ರಾರಂಭಿಸಿದೆ.

ದಾಖಲೆ

26 ವರ್ಷದ ಅಮೇರಿಕಾ ಮಹಿಳೆ ಜೆನ್ನೀ ಕಾಕ್ಸ್ ಹೊಸ ವಿಶ್ವ ದಾಖಲೆಯೊಂದನ್ನು ಸ್ಥಾಪಿಸಿದ್ದಾಳೆ ; ಆಕೆ 61 ದಿನಗಳ ಕಾಲ ಎತ್ತರದ ಕಂಭವೊಂದರ ಮೇಲೆ ವಾಸಿಸುತ್ತಿದ್ದಳು !

ಶುಕ್ರದೆಸೆ ಯಾವಾಗ ?

ಶುಕ್ರದೆಸೆ ಯಾವಾಗ ಬಂತೀತೆಂದು ಎದುರು ನೋಡುವವರಿಗೇನೂ ಕೊರತೆ ಇಲ್ಲ. ಈಗ ಭಾರತದಲ್ಲಷ್ಟೇ ಅಲ್ಲ, ಅಮೇರಿಕಾದಲ್ಲೂ ಶುಕ್ರದೆಸೆ ಬೆನ್ನು ಹತ್ತಿ ಹೊಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅಮೇರಿಕಾದ ಜ್ಯೋತಿಶ್ಶಾಸ್ತ್ರಜ್ಞರ ಸಂಘದ ಮಾಜಿ ಅಧ್ಯಕ್ಷ ಪಾಲ್‌ಗ್ರೇಡ್– ಹೆಚ್ಚು ಕಡಿಮೆ ಮಂದಿ ವ್ಯಾಪಾರೋದ್ಯಮಿಗಳ್ತಮ್ಮ ಯೋಜನೆಗಳನ್ನು ಪ್ರಾರಂಭಿಸಲು ಜ್ಯೋತಿಷಿಗಳ ಮತೆ ಹೊಕ್ಕುತ್ತಿದ್ದಾರೆ ; ತಮ್ಮ ಪ್ರತಿಸ್ಪರ್ಧಿಗಳ ವಕ್ರದೃಷ್ಟಿಗೆ ಬೀಳದಂತೆ ತಮ್ಮ ಭವಿಷ್ಯ ಯೋಜನೆಗಳನ್ನು ಅವರು ಗೋಪ್ಯವಾಗಿರಿಸುತ್ತಿದ್ದಾರೆ ; ಜ್ಯೋತಿಷಿಗಳಿಗೆ ಬೇಡಿಕೆ ಅಧಿಕವಾಗುತ್ತಿದೆ, ಎಂದು ಹೇಳಿದ್ದಾರೆ.

Help The Gorakshana

— Humanitarian Propoganda Monthly—

ಪೂರ್ಣ ನಿಶೇಧವಾಗಲಿ ಭಾರತದಲ್ಲಿ ಗೋವಧೆ



Protect the Cow

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 25 10 74 ರಿಂದ

ಅಮೋಘ 6 ನೇ ವಾರ

ಇಮ್ತಿಹಾನ್ Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 5 ಪ್ರದರ್ಶನಗಳು

ಅಪೆರಾ 25 10 74 ರಿಂದ

ಟಿ. ಆರ್. ರಾಜಕುಮಾರಿ, ರಂಜನ್, ಎಸ್. ಎಸ್. ಕೃಷ್ಣ,

ಟಿ. ಎ. ಮಧುರಂ ಅಭಿನಯಿಸಿರುವ ಅಮೋಘ ತಮಿಳು ಚಿತ್ರ

ಚಂದ್ರಲೇಖ

ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Contribute Liberally to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore